

ಪ್ರಸಾದ್ ಶೆಣೈ ಆರ್.ಕೆ.

# ಮಳೆ ಮತ್ತೂ ಜೋರಾಗಲಿ...

ಮೇ ತಿಂಗಳು ಮುಗಿಯುವ ಮೊದಲೇ ಕುಂಭದ್ರೋಣ ಮಳೆ ಹೊಡೆದದ್ದರಿಂದ ನೇರಳೆಪುರ ಯಾವತ್ತಿಗಿಂತಲೂ ಹಸಿರಾಗಿ ಕಾಣುತ್ತಿತ್ತು. ಜೂನ್ ಆರಂಭವಾಗಿ ಅಲ್ಲಲ್ಲಿ ಕೊಡೆ ಅಣಬೆಗಳು, ಮಂಡರುಗಪ್ಪೆಗಳು, ಹಳ್ಳೇಡಿಗಳು, ರಾತ್ರಿ ಸುತ್ತಲಿದ್ದ ಮರಗಳಲ್ಲಿ ನಕ್ಷತ್ರ ಚೆಲ್ಲಿದಂತಹ ಮಿಣುಕು ಹುಳುಗಳು ಹರಡಿ ನೇರಳೆಪುರದ ಮಳೆಗಾಲ ನಿಗೂಢವಾಗಿಯೂ, ಸಮೃದ್ಧವಾಗಿಯೂ, ಮನೋಹರವಾಗಿಯೂ ಕಾಣುತ್ತಿತ್ತು. ಈ ಸಂಜೆಯೂ ದೂರದ ಕುರಿಂಜೆಲ್ ಬೆಟ್ಟದಲ್ಲಿ ಮಳೆ ಮೋಡಗಳು ದಟ್ಟವಾಗಿ, ಮಲೆನಾಡಿನ ಕೆಳಗಿರುವ ಈ ಮಹಾರಣ್ಯದಲ್ಲೆಲ್ಲಾ ಕತ್ತಲು ಆವರಿಸತೊಡಗಿತು. ಎಲ್ಲೋ ಇದ್ದ ಮಳೆ ಹನಿಗಳೆಲ್ಲಾ ಒಟ್ಟಾಗಿ ಭಾರೀ ಸದ್ದು ಮಾಡಿ ಬೀಸತೊಡಗಿದ ರಭಸಕ್ಕೆ ಕಮಲಜ್ಜಿಯ ಒಂಟಿ ಮನೆಯ ಹಂಚು ತೊಯ್ದು ತೊಪ್ಪೆಯಾಗಿ ಗಾಳಿಗೆ ತೂತಿನಲ್ಲೆಲ್ಲೋ ಇಟ್ಟಿದ್ದ ತಗಡು ಶೀಟುಗಳು ದೊಬ್ಬಂತ ಬಿದ್ದ ಸದ್ದು ಆ ಕಾಡಿನ ಮಳೆ ಗಾಳಿಗಳ ರೌದ್ರಬೀಸಿನಲ್ಲಿ ಯಾರಿಗೂ ಕೇಳಿಸುವಂತಿರಲಿಲ್ಲವಾದರೂ, ಒಳಗೆ ಕಪ್ಪು ಬಿಳುಪು ಗೊಂಡೆಬಾಲದ ಬೆಕ್ಕಿನ ಜೊತೆಗೆ ಬೆಚ್ಚಗೇ ಕೂತಿದ್ದ ಕಮಲಜ್ಜಿಗೂ, ಆ ಬೆಕ್ಕಿಗೂ ಕೇಳಿಯೇ ಕೇಳಿಸಿತು. ಆಕೆ ಹಗೂರನೇ ಎದ್ದು ಬಾಗಿಲು ತೆಗೆದು ಹೊರ ಇಣುಕಿದಾಗ ತಗಡು ಶೀಟು ಬಿದ್ದು ಅಂಗಳದಲ್ಲಿ ತೇಲುತ್ತಿತ್ತು.

"ಅಯ್ಯೋ ಕರ್ಮ, ಇದ್ರದ್ದೊಂದು ಗ್ರಾಚಾರ," ಅಂತ ಒಳಗೊಳಗೆನೇ ಉಗಿದು ದೂರದ ದಾರಿ ನೋಡಿದಳು. ಮಳೆಗೆ ಆ ದಾರಿಯಲ್ಲಿ ಏನಾಗುತ್ತಿದೆ? ಯಾರು ಬರುತ್ತಿರಬಹುದು? ಆ ದಾರಿ ಸೀದಾ ಸಾಗಿದರೆ ಎಲ್ಲಿಗೆ ಹೋಗುತ್ತದೆ? ಅನ್ನೋದು ಯಾರಿಗೂ